ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ರಾಜ್ಯ ಸರ್ಕಾರದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯು ಹೇಗಿದೆ ಎಂದರೆ, ಮುಖ್ಯವಾದ ಅತ್ಯಗತ್ಯ ವೆಚ್ಚಗಳನ್ನು ಭರಿಸಲು ಸರ್ಕಾರಕ್ಕೆ ಸಾಧ್ಯವಾದರೂ ಸಹ ಅರ್ಥೋಪಾಯ ಸ್ಥಿತಿಯ ಮೇಲೆ ಕಟ್ಟುನಿಟ್ಟಾದ ಎಚ್ಚರ ವಹಿಸುವ ಅಗತ್ಯವಿದೆ.

ಆ) ಇಲ್ಲ

ಇ) ಸದ್ಯದ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿಯಲ್ಲಿ ಶ್ವೇತ ಪತ್ರ ಹೊರಡಿಸುವಿಕೆ ಅನವಶ್ಯಕ.

ಈ) ಮಹಾಲೇಖಪಾಲರು ಪ್ರತಿ ಮಾಸದಲ್ಲಿ ಬರುವ ವಾಸ್ತವಿಕ ಆದಾಯ ಮತ್ತು ಖರ್ಚಿನ ಮಾಸಿಕ ಹಣಕಾಸಿನ ವ್ಯವಹಾರದ ಲೆಕ್ಕಪತ್ರದ ವರದಿಯನ್ನು ನೀಡುತ್ತಾರೆ. ಮಹಾಲೇಖಪಾಲರು ಇತ್ತೀಚೆಗೆ ನೀಡಿರುವ ಹಣಕಾಸಿನ ವ್ಯವಹಾರದ ಲೆಕ್ಕಪತ್ರದ ಮಾಸಿಕ ವರದಿಯು 1992ರ ಸೆಪ್ಟೆಂಬರ್ ತಿಂಗಳಿಗೆ ಸಂಬಂಧಿಸಿರುತ್ತದೆ. ಈ ವರದಿಯ ಪ್ರಕಾರ ರಾಜ್ಯದ ಬೊಕ್ಕಸಕ್ಕೆ 1992ರ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ವಿವಿಧ ಮೂಲಗಳಿಂದ ಬಂದ ಒಟ್ಟು ಆದಾಯ 2465–50 ಕೋಟಿ ರೂ.ಗಳು 1992ರ ನವೆಂಬರ್ ತಿಂಗಳ ಅಂತ್ಯದವರೆಗಿನ ಅಂಕಿ ಅಂಶಗಳು 1993ರ ಜನವರಿ ತಿಂಗಳಿನಲ್ಲಿ ಮಾತ್ರ ದೊರೆಯುತ್ತವೆ.

ಸಂಕಷ್ಟ ಪತ್ರಕರ್ತರಿಗೆ ಮಾಸಿಕ ವೇತನ.

50 (50) ಶ್ರೀ ಎಂ.ವಿ. ವೆಂಕಟಪ್ಪ, (ಮುಳಬಾಗಿಲು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ವಯಸ್ಸಾದ ಕೆಲವು ಪತ್ರಕರ್ತರು ಸಂಕಷ್ಟದಲ್ಲಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಂಕಷ್ಟ ಪತ್ರಕರ್ತರಿಗೆ ಮಾಸಿಕ ವೇತನ ನೀಡುವ ಯಾವುದಾದರೂ ಯೋಜನೆಗಳನ್ನು ಜಾರಿಗೊಳಿಸಲಾಗಿದೆಯೇ;

ಇ) ಇಲ್ಲವಾದರೆ ಸಂಕಷ್ಟ ಸ್ಥಿತಿಯಲ್ಲಿರುವ ಪತ್ರಕರ್ತರಿಗೆ ಮಾಸಿಕ ವೇತನ ನೀಡಲು ಶಿಫಾರಸ್ಸು ಮಾಡಲು ಸರ್ಕಾರ ಒಂದು ಸಮಿತಿಯನ್ನು ರಚಿಸುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಹೌದು.

ಆ) ಹೌದು.

ಇ) ಉದ್ಭವಿಸುವುದಿಲ್ಲ. ಸರ್ಕಾರವು ಹಿಂದೆಯೇ ಈ ಬಗ್ಗೆ ಒಂದು ಸಮಿತಿಯನ್ನು ರಚಿಸಿದೆ.

ಕೋಲಾರ ಜಿಲ್ಲೆಯಲ್ಲಿ ಕಪ್ಪು ಹಲಗೆಯ ಅಡಿಯಲ್ಲಿ ನೇಮಿಸಲಾದ ಉಪಾಧ್ಯಾಯರುಗಳು.

51 (52) ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?